(ದಿನಾಂಕಃ 03.05.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಂದುವರಿದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಜಿ.ಕೆ ರವರಿಂದ ಃ-**

2. ನನ್ನ ಮದುವೆ ಆಗಿ ಒಂದು ವರ್ಷದ ವರೆಗೆ ಎದುರುದಾರನ ಜೊತೆಯಲ್ಲಿ ವಾಸವಿರುತ್ತೇನೆ.

3. ನಮ್ಮ ಮದುವೆ ಆಗಿ ಮೂರು ತಿಂಗಳಿನಲ್ಲಿ ನಾನು ಗರ್ಭಿಣಿಯಾಗಿರುತ್ತೇನೆ. ನಾನು ಗರ್ಭಿಣಿ ಆಗಿ ನಂತರ ನಾನು ನನ್ನ ತವರು ಮನೆಗೆ ಬಂದಿರುತ್ತೇನೆ.

4. ನಾನು ಅರ್ಜಿದಾರ 2 ರವರಿಗೆ ಜನ್ಮ ಕೊಡುವವರೆಗೂ ಮತ್ತು ಕೊಟ್ಟ ನಂತರ ನನ್ನ ತಾಯಿಯ ಮನೆಯಲ್ಲಿ ಇದ್ದೆ.

5. ನಾನು ಸದರಿ ಸಂದರ್ಭದಲ್ಲಿ ಅಂಗನವಾಡಿಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ. ನನಗೆ ಮಗು ಹುಟ್ಟಿ ಆರು ತಿಂಗಳ ನಂತರ ನನ್ನ ಕೆಸಕ್ಕೆ ಮರು ಸೇರಿರುತ್ತೇನೆ.

6. ನಾನು ನಮ್ಮ ತವರು ಮನೆಯ ಹತ್ತಿರದ ಕುನ್ನೂರು ಅಂಗನವಾಡಿ ಕೇಂದ್ರದಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತೇನೆ. ಸದರಿ ಕೆಲಸದ ಸಂದರ್ಭದಲ್ಲಿ ನನ್ನ ಮಗುವನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು.

7. ಈ ಮೇಲಿನ ಎಲ್ಲಾ ವಿಷಯವನ್ನು ಈ ಜೀವನಾಂಶದ ಅರ್ಜಿಯಲ್ಲಿ ಹೇಳಿ ಬರೆಸಿರುತ್ತೇನೆ. ಸದರಿ ವಿಷಯವನ್ನು ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

8. ನನಗೆ ನನ್ನ ಗಂಡ ಎದುರುದಾರನು ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟಿರುತ್ತಾರೆ ಎಂದು ಮಹಿಳಾ ಸಮಯಾ ಕಲ್ಯಾಣ ಇಲಾಖೆಗೆ ಮತ್ತು ನಮ್ಮ ಕುಟುಬಂದ ಹಿರಿಯ ಸಧ್ಯಸ್ಯರಿಗೆ ತಿಳಿಸಿರುವುದಿಲ್ಲ ಮತ್ತು ದೂರನ್ನು ದಾಖಲಿಸಿರುವುದಿಲ್ಲ ಎಂದರೆ ಸರಿ,

9. ನಾನು ಈ ಹಿಂದೆ ಕ್ರಿಮಿನಲ್ ಮಿಸ್ 82/2017 ಅನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

10. ಸದರಿ ಅರ್ಜಿಯಲ್ಲಿ ನನ್ನ ಗಂಡ ಎದುರುದಾರನು ನನ್ನನ್ನು ಚೆನ್ನಾಗಿ ನೊಡಿಕೊಳ್ಳುತ್ತೇನೆ ಎಂದು ಸದರಿ ಅರ್ಜಿಯನ್ನು ಮುಕ್ತಾಯ ಮಾಡಿರುತ್ತೇವೆ ಎಂದರೆ ಸರಿ.

11. ಸದರಿ ಅರ್ಜಿ ಮುಕ್ತಾಯ ವಾದ ನಂತರ ನಾನು ನನ್ನ ಗಂಡ ಎದುರುದಾರನಿಗೆ ಮತ್ತು ಆತನ ಪೊಷಕರಿಗೆ  ಜೊತೆ ಮಾತನಾಡದೇ ಇರುವುದು ಅವಮಾನ ರೀತಿ ನಡೆದುಕೊಳ್ಳುವುದು ಅವರಿಗೆ ಅಗೌರವ ತೊರುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ.

12. ನಾನು ಮನೆಯಲ್ಲಿ ಸಣ್ಣ ಪುಟ್ಟ ಕೆಲಸ ಮಾಡದೇ ಇರುವುದು ಮತ್ತು ನನ್ನ ಮಗುವನ್ನು ನನ್ನ ಗಂಡ ಎದುರುದಾರನ್ನು ಮಾತನಾಡಲು ಪ್ರಯತ್ನಿಸಿದಾಗ ನನ್ನ ಗಂಡನಿಗೆ ಆ ಮಗು ನಿನ್ನದಲ್ಲ ನೀನು ಆ ಮಗುವನ್ನು ಮಾತನಾಡಿಸಬಾರದು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರ ಬಾಡಿಗೆ ಮನೆಗೆ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ.

13. ನನಗೆ ಎದುರುದಾರನ ಮನೆಯಲ್ಲಿ ಯಾವುದೇ ತೊಂದರೆ ಇಲ್ಲದೇ ಇದ್ದರೂ ಸಹ ಅಕ್ಕ ಪಕ್ಕದ ಮನೆಯ ಜನರಿಗೆ ಗೊತ್ತಾಗುವಂತೆ ಎದುರುದಾರ/ನನ್ನ ಗಂಡ ಮತ್ತು ಆತನ ಪೋಷಕರ ಜೊತೆ ಜೊರಾಗಿ ಕೂಗಿ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

14. ನನ್ನ ಗಂಡ ತನ್ನ ಮನೆಯಲ್ಲಿ ನನಗೆ ಅನ್ಯೊನ್ಯವಾಗಿ ನೋಡಿಕೊಂಡು ನನಗೆ ಬೇಕಾಗುವ ಬಟ್ಟೆ ಬರಿ ಹೊಟ್ಟೆಗೆ ಏನು ಕಡಿಮೆ ಮಾಡದಂತೆ ನೋಡಿಕೊಂಡು ತುಂಬಾ ಅನ್ಯೊನ್ಯವಾಗಿದ್ದನು ಎಂದರೆ ಸರಿಯಲ್ಲ.

15. ನಾನು ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಕೆಲಸಕ್ಕೆ ಹೊಗುತ್ತಿರುತ್ತೇನೆ ಕೆಲಸವನ್ನು ಬಿಡಲು ಆಗದೇಇರುವುದರಿಂದ ನಾನು ನನ್ನ ಗಂಡನ ಮನೆಯನ್ನು ಗಂಡನಿಗೆ ಮತ್ತು ಆತನ ಪೊಷಕರಿಗೆ ಹೇಳದೇ ಬಂದಿರುತ್ತೇನೆ ಎಂದರೆ ಸರಿಯಲ್ಲ.

16. ಈ ಹಿಂದೆ ಅರ್ಜಿಹಾಕಿದ ಸಂದರ್ಭದಲ್ಲಿ ನಾನು ಕೆಲಸದರಲ್ಲಿ ಇದ್ದೆ ಎಂದರೆ ಸರಿ. ನಾನು ಕೆಲಸವನ್ನು ಬಿಟ್ಟಿರುವುದಕ್ಕೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

17. ನನ್ನನ್ನು ನನ್ನ ಗಂಡ ತನ್ನ ಮನೆಗೆ ಬರುವಂತೆ ವಿನಂತಿಸಿಕೊಂಡಿದ್ದರೂ ಸಹ ನಾನು ನನ್ನ ಗಂಡನ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಎದುರುದಾರನ ವಿರುದ್ಧ ಸುಳ್ಳು ಸಂಗತಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

18. ನನ್ನ ಮತ್ತು ಎದುರದಾರನ ಮದುವೆ ಸಂದರ್ಭದಲ್ಲಿ ನನ್ನ ಅರ್ಜಿಯಲ್ಲಿ ಹೇಳಿದಂತಹ ಆಭರಣಗಳನ್ನು ಒರದಕ್ಷಿಣೆಯಾಗಿ ಕೊಟ್ಟಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

19. ಎದುರುದಾರನು ನಮಗೆ ಸೇರಿದ ಬಂಗಾರದ ಆಭರಣವನ್ನು ಗಿರವಿ ಇಟ್ಟು ಮತ್ತು ನನ್ನ ಉಳಿತಾಯ ಹಣವನ್ನು ಉಪಯೋಗಿಸಿರುತ್ತಾನೆ ಎಂದರೆ ಸರಿಯಲ್ಲ.

20. ನನ್ನ ಗಂಡ ತಾಜ್ ಹೊಟೆಲ್ ನಲ್ಲಿ ಸೆಲ್ವ ಸರ್ವೀಸ್ ಮಾಡುತ್ತಾರೆ. ಸದರಿ ವಿಷಯವನ್ನು ನನ್ನ ಅರ್ಜಿಯಲ್ಲಿ ತೋರಿಸಿರುವುದಿಲ್ಲ.

21. ಎದುರುದಾರನು ಕೂಲಿ ಕೆಲಸ ಮಾಡಿಕೊಂಡು ತನ್ನ ಜೀವನ್ನು ನಡೆಸುತ್ತಿದ್ದಾನೆ ಎಂದರೆ ಸರಿಯಲ್ಲ.

22. ನಾನು ನನ್ನ ಗಂಡನ ಮನೆಯನ್ನು ಯಾವುದೇ ಕಾರಣಗಳು ಇಲ್ಲದೇ ನನ್ನನ್ನು ಚೆನ್ನಾಗಿ ನೊಡಿಕೊಂಡಿದ್ದರೂ ಸಹ ನನ್ನ ಗಂಡನಿಗೆ ಮತ್ತು ಆತನ ಕುಟುಂಬದವರಿಗೆ ತೊಂದರೆ ಕೊಡುವುದರಿಂದ ಬಂದಿರುತ್ತೇನೆ ಎಂದರೆ ಸರಿಯಲ್ಲ.

23. ನಾನು ನನ್ನ ಗಂಡನನ್ನು ಬಿಟ್ಟು ಬಂದಿದ್ದರಿಂದ ನನ್ನ ಗಂಡ ನನ್ನ ವಿಚಾರಮಾಡಿಕೊಂಡು ತನ್ನ ಆರೋಗ್ಯವನ್ನು ಹದಗೆಡಿಸಿಕೊಂಡಿರುತ್ತಾರೆ ಎಂರದೆ ಸರಿಯಲ್ಲ.

24. ನನ್ನ ಗಂಡ ನನ್ನ ವಿಚಾರಮಾಡಿಕೊಂಡು ಆರೊಗ್ಯವನ್ನು ಹದಗೆಡಿಸಿಕೊಂಡು ಕೆಸಕ್ಕೆ ಹೋಗದೆ ಮನೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

25. ನನಗೆ ಪುಸ್ತಕವನ್ನು ಬರೆಯುವ ಹವ್ಯಾಸ ಇರುವುದಿಲ್ಲ. ಸಾಕ್ಷಿಗೆ ಒಂದು ಬುಕ್ ಅನ್ನು ತೋರಿಸಿ ಅದನ್ನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ.

26. ನಾನು ನನ್ನ ಮಗು ಎದುರುದಾರನ ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ನನ್ನ ಗಂಡ ನನ್ನನ್ನು ಕರೆದಿದ್ದರೂ ಸಹ ನಾನು ಹೋಗದೇ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

27. ಎದುರುದಾರನಿಗೆ 80 ರಿಂದ 90 ಸಾವಿರ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಬಾಡಿಗೆ ಮನೆಯಲ್ಲಿ ಇದ್ದು ಬಾಡಿಗೆ ಕಟ್ಟಲು ಅಸಮರ್ಥನಾಗಿರುತ್ತಾನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.